ಕರ್ನಾಟಕ ಸರ್ಕಾರದ ನಡವಳಿಗಳು

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಬಿ.ಎಸ್ (1) 2967
ದಿನಾಂಕ 30-5-16

ವಿಷಯ:- 2014-15ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಗೆ ಒದಗಿಸಿರುವ ರೂ.1000.00ಕೋಟಿ ಅನುದಾನದಡಿ ಕೈಗೊಳ್ಳುವ ಪ್ಯಾಕೇಜ್ ಕಾಮಗಾರಿಗಳಿಗೆ ಆಡಳಿತಾತ್ಮಕ ಹಾಗೂ ಟೆಂಡರ್ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್‌ಎಫ್‌ಸಿ 2014, ದಿನಾಂಕ: 27-01-2015.

2) ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಮುಅ (ಯೋ) /ಪಿಆರ್/ 08/2016-17, ದಿನಾಂಕ:20-04-2016.

3) ದಿನಾಂಕ:13-05-2016ರಂದು ನಡೆದ ಬಿಬಿಎಂಪಿ ನಗರೋತ್ಥಾನ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

COMMISSIONER
Bruhat Bengalore Mahanagara Palike

ಪ್ರಸ್ತಾವನೆ:-

ಮೇಲೆ ಓದಲಾದ (1)ರ ಆದೇಶದಲ್ಲಿ 2014-15ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳುವ ರೂ.1000.00ಕೋಟಿ ಅಂದಾಜು ಮೊತ್ತದ ಒಟ್ಟು 532 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಆದೇಶದಲ್ಲಿ ರೂ.6.00 ಕೋಟಿಗಳ ಅಂದಾಜು ಮೊತ್ತದ **"ಅಳ್ಳಾಳಸಂದ್ರ ಕೆರೆಯ ಹಳ ವಾರ್ಡ್ ನಂ.4ರಲ್ಲಿ ಈಜುಕೊಳ ನಿರ್ಮಾಣ ಕಾಮಗಾರಿ"**ಯ ಕಾಮಗಾರಿಗೆ ಅನುಮೋದನೆ ನೀಡಲಾಗಿರುತ್ತದೆ.

ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರಿಕ್ಷೀಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮೇಲೆ ಓದಲಾದ (1)ರ ಆದೇಶದಲ್ಲಿ ಅನುಮೋದನೆ ನೀಡಲಾಗಿರುವ ಹಿನ್ನಲೆಯಲ್ಲಿ, ಬಿಬಿಎಂಪಿಯು ಸದರಿ ಕಾಮಗಾರಿಗೆ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಲಾಗಿದ್ದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತವೆ.

(ರೂ.ಗಳಲ್ಲಿ)

ಕ್ರ. ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಟೆಂಡರ್‌ಗಿಟ್ಟ ಮೊತ್ತ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ	2014-15ನೇ ಸಾಲಿನ ದರಗಳಿಗೆ ಹೋಲಿಸಿದಾಗ
1.	K.V Krishna Reddy (Ramkrishy Infrastructure Private Limited)	5,73,02,896/-	5,95,81,225/-	3.98% above
2.	M. Rajendra (M.R Constructions)		6,97,67,011/-	21.75% above

ಮೇಲ್ಕಂಡ ಗುತ್ತಿಗೆದಾರರ ಪೈಕಿ ಅತಿ ಕಡಿಮೆ ಮೊತ್ತ ನಮೂದಿಸಿರುವ ಗುತ್ತಿಗೆದಾರರಾದ K.V Krishna Reddy (Ramkrishy Infrastructure Private Limited) ರವರು ನಮೂದಿಸಿರುವ ಗುತ್ತಿಗೆ ಮೊತ್ತ ರೂ.5,95,81,225/-ಗಳಿಗೆ ಅನುಮೋದನೆ ನೀಡುವಂತೆಯೂ ಹಾಗೂ ಅದರಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆಯೂ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (2)ರ ಪತ್ರದಲ್ಲಿಕೋರಿರುತ್ತಾರೆ.

..2..

ಮೇಲ್ಕಂಡ ಪ್ರಸ್ತಾವನೆಯನ್ನು ದಿನಾಂಕ:13-05-2016ರಂದು ನಡೆದ ಬಿಬಿಎಂಪಿ ನಗರೋತ್ಥಾನ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಮಂಡಿಸಿ, ಸದರಿ ಸಭೆಯು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ 206 ಎಸ್‌ಎಫ್‌ಸಿ 2016,
ಬೆಂಗಳೂರು, ದಿನಾಂಕ:26-05-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ (1)ರ ಆದೇಶದಲ್ಲಿ 2014-15ನೇ ಸಾಲಿನ ನಗರೋತ್ಥಾನ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಅನುಮೋದನೆ ನೀಡಿರುವ ಕಾಮಗಾರಿಗಳ ಪೈಕಿ ಈ ಕೆಳಕಂಡ **ಕಾಮಗಾರಿಯ** ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಹಾಗೂ ಸದರಿ ಕಾಮಗಾರಿಯ ಟೆಂಡರ್ (ಆರ್ಥಿಕ ಬಿಡ್) ಪ್ರಸ್ತಾವನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

ಕಾಮಗಾರಿಯ ಹೆಸರು	ಅರ್ಹ ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) 2014-15ನೇ ಸಾಲಿನ ದರಪಟ್ಟಿಯಂತೆ	ಗುತ್ತಿಗೆದಾರರು ನಮೂದಿಸಿರುವ ಮೊತ್ತ.	ಗುತ್ತಿಗೆದಾರರು ನಮೂದಿಸಿದ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾವಾರು ಪ್ರೀಮಿಯಂ	ಕನಿಷ್ಟ ದರಗಳನ್ನು ನಮೂದಿಸಿದ ಗುತ್ತಿಗೆದಾರರ ಮೊತ್ತ (ರೂ. ಗಳಲ್ಲಿ) ಹಾಗೂ ಶೇಕಡಾವಾರು ಟೆಂಡರ್ ಪ್ರೀಮಿಯಂ	ಸರ್ಕಾರವು ಅನುಮೋದಿಸಿರುವ ಟೆಂಡರ್ ಮೊತ್ತ (ರೂ ಗಳಲ್ಲಿ)
ಬಿಬಿಎಂಪಿ ವ್ಯಾಪ್ತಿಯಲ್ಲಿ "ಅಳ್ಳಾಳಸಂದ್ರ ಕೆರೆಯ ಬಳಿ ವಾರ್ಡ್ ನಂ.4ರಲ್ಲಿ ಈಜುಕೊಳ ನಿರ್ಮಾಣ ಕಾಮಗಾರಿ"	ಶ್ರೀ. ಕೆ.ವಿ ಕೃಷ್ಣರೆಡ್ಡಿ (**RamKrishy infrastructure Pvt.Ltd**)	57302896.40/-	59581225.45/ -**(L1)**	ಶೇಕಡಾ 3.98% ರಷ್ಟು ಹೆಚ್ಚಳ	**59581225.45 2015-16ನೇ ಸಾಲಿಗೆ ಹೋಲಿಸಿದಾಗ ಶೇಕಡಾ 9.14% ರಷ್ಟು ಹೆಚ್ಚು.**	**5,72,68,642/- 2015-16ನೇ ಸಾಲಿನ ದರಪಟ್ಟಿಯಂತೆ ಶೇಕಡಾ 4.9% ರಷ್ಟು ಹೆಚ್ಚು.**

ಷರತ್ತುಗಳು

1. ಮೇಲ್ಕಂಡ ಪಟ್ಟಿಯಲ್ಲಿ ಅನುಮೋದನೆ ನೀಡಿರುವಂತೆ ಕಾಮಗಾರಿಯನ್ನು 2015-16 ನೇ ಸಾಲಿನ ದರ ಪಟ್ಟಿಯಂತೆ ಶೇ.4.9ರ ಟೆಂಡರ್ ಪ್ರೀಮಿಯಂನಲ್ಲಿ ನಿರ್ವಹಿಸಲು ಗುತ್ತಿಗೆದಾರರು ಒಪ್ಪಿದಲ್ಲಿ ಮಾತ್ರ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ಕಾರ್ಯಾದೇಶ ನೀಡತಕ್ಕದ್ದು, ಇಲ್ಲದಿದ್ದಲ್ಲಿ ಮರು ಟೆಂಡರ್ ಕರೆಯಲು ಕ್ರಮವಹಿಸತಕ್ಕದ್ದು.

2. ಮೇಲ್ಕಂಡ ಕಾಮಗಾರಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್‌ಎಫ್‌ಸಿ 2015, ದಿನಾಂಕ:27-01-2015ರ ಆದೇಶದಲ್ಲಿ ವಿವರಿಸಿರುವ ಷರತ್ತುಗಳನ್ವಯ ಅನುಷ್ಠಾನಗೊಳಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ:ನಅಇ 507 ಎಸ್‌ಎಫ್‌ಸಿ 2015, ದಿನಾಂಕ:22-12-2015ರನ್ವಯ ಗುತ್ತಿಗೆದಾರರು ಕಾಮಗಾರಿಯನ್ನು ಎರಡು ಪಾಳಿಗಳಲ್ಲಿ ನಿರ್ವಹಿಸುವಂತೆ ಹಾಗೂ ವಿಳಂಭ ನೀತಿ ಅನುಸರಿಸದಂತೆ ಗುತ್ತಿಗೆ ಕರಾರಿನ ಅನ್ವಯ ಎಲ್ಲಾ ಅವಶ್ಯ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

..3..

4. ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್‌ಎಫ್‌ಸಿ 2015, ದಿನಾಂಕ:27-01-2015ರ ಆದೇಶದಲ್ಲಿ ಅನುಮೋದಿತ ಮೊತ್ತಕ್ಕಿಂತ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಟೆಂಡರ್ ಮೊತ್ತವು ಹೆಚ್ಚುವರಿಯಾದಲ್ಲಿ ಹೆಚ್ಚುವರಿ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು, ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನವನ್ನು ಒದಗಿಸುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/5/16

(ಕೆ.ಎಸ್ ಭಾಗ್ಯಮ್ಮ)
ಸರ್ಕಾರ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
3) ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
4) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
5) ಮುಖ್ಯ ಅಭಿಯಂತರರು (ರ.ಮೂ.ಸೌ), ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
6) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.